R No KANN 12

25 - 2 - 1975

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

in ★ ★ ★ ★ ★

58 th Year
ನೇ ವರ್ಷ

ಸತ್ಯವಾದಿ
SATYAVADI

Golden Jubilee
Celebrated Paper
Satyavadi Daily
Mysore 4
- For Influential Publicity -

ಪ್ರಕಾಶಕರು: ಅರಮನೆ ಏರಸ್ಪ್ರೆಡಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮವ್ಯಾಖ್ಯಾನವಿರತ ಎಂ. ಎಸ್. ಕೃಷ್ಣರಾವ್ 3 ಸಂ.

ಕಾವೇರಿ ವಿವಾದ ಬಗೆಗೆ ಮಾತುಕತೆ

ಭಾರತಕ್ಕೆ ಆಗಮನ

ಆಸ್ಟ್ರೇಲಿಯಾದ ಗವರ್ನರ್ ಜನರಲ್ ಸರ್ ಜಾನ್ ಕೆರ್ ನಾಲ್ಕು ದಿವಸಗಳ ಭಾರತದ ಭೇಟಿಗಾಗಿ ಈ ತಿಂಗಳು 27ನೇ ತಾ ನವ ದೆಹಲಿಗೆ ಆಗಮಿಸುವರು.

★

ಗಂಗಾ ಕುರಿತು ಮಾತುಕತೆ

ಗಂಗಾ ನದಿಯ ನೀರಿಗೆ ಸಂಬಂಧಿಸಿದಂತೆ ಭಾರತ–ಬಾಂಗ್ಲಾದೇಶಗಳಲ್ಲಿ ಮಾತುಕತೆ ನವ ದೆಹಲಿಯಲ್ಲಿ ಆರಂಭವಾಯಿತು.

●

ಹರತಾಳಕ್ಕೆ ಕರೆ

ಸೇಕ್ ಅಬ್ದುಲ್ಲ ಹಾಗೂ ಕೇಂದ್ರ ಇವರಲ್ಲಿ ಆಗಿರುವ ಒಪ್ಪಂದ ಪ್ರತಿಭಟಿಸಿ ಶುಕ್ರವಾರ ಹರತಾಳ ಆಚರಿಸುವಂತೆ ಸ್ವದೇಶ ಹಾಗೂ ವಿದೇಶಗಳಲ್ಲಿ ಇರುವ ಪಾಕೀಸ್ತಾನದವರಿಗೆ ಹಾಗೂ ಕದನ ವಿರಾಮ ಗೆರೆಯ ಎರಡು ಕಡೆಗಳಲ್ಲಿನ ಕಾಶ್ಮೀರದವರಿಗೆ ಪಾಕೀಸ್ತಾನದ ಪ್ರಧಾನಿ ಭುಟ್ಟೋರವರು ಕರೆ ನೀಡಿದ್ದಾರೆ.

★

ಪಾಕ್‌ಗೆ ಆಯುಧ ನೆರವು

ಪಾಕೀಸ್ತಾನಕ್ಕೆ ಅಮೇರಿಕ ಒಂಬೈನೂರು ಟ್ಯಾಂಕುಗಳನ್ನು ಮತ್ತು ಮುನ್ನೂರು ಯುದ್ಧ ವಿಮಾನಗಳನ್ನು ಕೊಡುವುದು. ನೆಲದಿಂದ ಗಾಳಿಗೆ, ಗಾಳಿಯಿಂದ ಗಾಳಿಗೆ ಇರುವ ಕ್ಷಿಪಣಿಗಳನ್ನು ಒದಗಿಸಬೇಕೆಂಬ ಪಾಕೀಸ್ತಾನದ ಬೇಡಿಕೆ ಅಮೇರಿಕ ಸರಕಾರದ ಪರಿಶೀಲನೆಯಲ್ಲಿದೆ

★

ಅಂಜಿ ಕಚೇರಿಗೆ ಬೆಂಕಿ

ಪಿಲಾಂಗಿನ ಮುಖ್ಯ ಅಂಚೆ ಕಚೇರಿಗೆ ಬೆಂಕಿ ಬಿದ್ದು ಕಟ್ಟಡದ ಅರ್ಧ ಭಾಗ ನಷ್ಟಗೊಂಡಿದೆ

ಸ್ವರಿಪೂರ್ಣತೆ

ಪೆಟ್ರೋಲಿಯಂ ಹಾಗೂ ಕೆಮಿಕಲ್ಸ್ ಮಂತ್ರಿಯವರಾದ ಶ್ರೀ ಕೆ. ಡಿ. ಮಾಳವೀಯರವರು ರಾಜ್ಯಸಭೆಯಲ್ಲಿ ಮಾತನಾಡುತ್ತಾ 1980 ಅಥವಾ ಅದಾದನಂತರ ಕೆಲ ವರ್ಷಗಳಲ್ಲಿ ಭಾರತ ಎಣ್ಣೆಯ ವಿಚಾರದಲ್ಲಿ ಸ್ವಸ್ಥರಿಪೂರ್ಣವಾಗುವುದು ಎಂದರು.

ವಿಶೇಷ ನ್ಯಾಯಾಧೀಶರಿಂದ ವಿಚಾರಣೆ

ದೆಹಲಿಯಲ್ಲಿ ವಿಶೇಷ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಸಿ ಬಿ ಐ ನವರ ಮೊಕದ್ದಮೆಗಳಾ ಶ್ರೀ ತುಳು ಪೆಕೇಹನರು ಮಂತ್ರಿಬ್ಬರ ವೇಲೆ ಅಮೆರಿಕ ಸ್ಯಾಂಡಲ್‌ಗ ಸಂಬಂಧಿಸಿದಂತೆ ನಡೆಯಲಿರುವುದು.

○ ತನ್ನಲ್ಲಿರುವ ನ್ಯೂಸ್ ಪ್ರಿಂಟ್ ಮಾರಾಟಕ್ಕೆ ಬಾಂಗ್ಲಾ ದೇಶ ಪೇಟೆಯನ್ನು ಹುಡುಕುತ್ತಿರುವುದಾಗಿ ಸಿಂಗ್ಪುರ ಪಾರ್ತೆ

● ಪುಣೆಯಲ್ಲಿ ಶ್ರೀ ಎಂ ಸಿ. ಚಾಗ್ಲಾರವರು ಬಳಕೆಯಾಗದ ಪಾರ್ಲಿಮೆಂಟ್ ಅರಂಭಿಸುತ್ತಾ, ಇದು ದೆಹಲಿಯಲ್ಲಿರುವ ಪಾರ್ಲಿಮೆಂಟಿನ ರೀತಿ ಆಗಬಾರದೆಂದು, ಇದು ರಾಜಕೀಯದಿಂದ ದೂರವಾಗಿ ಇರಬೇಕೆಂದು ತಿಳಿಸಿದರು

●

ಅದ್ವಾನಿಯವರ ಎಚ್ಚರಿಕೆ

ಜನಸಂಘದ ಅಧ್ಯಕ್ಷರಾದ ಶ್ರೀ ಎಲ್. ಕೆ. ಅದ್ವಾನಿಯವರು ಜಮ್ಮುವಿನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ, ಕಾಶ್ಮೀರದ ವಜೀರ್–ಇ-ಅಜಂ ಆಗಿ ಸೇಕ್ ಅಬ್ದುಲ್ಲರವರನ್ನು ನೇಮಿಸಿರುವುದು ಪ್ರಕ್ಷೋಭಕ ಹಾಗೂ ವಿನಾಶಕಾರಕ ಅನೇಕ ಘಟನೆಗಳಿಗೆ ಅವಕಾಶ ಮಾಡಿಕೊಡುವುದಾಗಿ ತಿಳಿಸಿದರು.

● ಎಂ ಡಿ ಟಿ ಡಿ ಬಿ ಕಾಲೇಜ್ ಉಪಾಧ್ಯಾಯರ ಉರವಣಿಸ ಮುಷ್ಕರ ನಿಂತಿಲ್ಲ

ಕಾಮರಾಜರ ಎಚ್ಚರಿಕೆ

ದಿಢೀರ್ ಚುನಾವಣೆ ಬಗ್ಗೆ ಸಂಸ್ಥಾ ಕಾಂಗ್ರೆಸ್ ಕಾರ್ಯಕರ್ತರು ಎಚ್ಚರಿಕೆಯಿಂದ ಇರಬೇಕೆಂದು ಶ್ರೀ ಕೆ. ಕಾಮರಾಜರು ಮಧುರೆಯಲ್ಲಿ ತಿಳಿಸಿರುವರು

●

ಪ್ರಧಾನರ ಒಪ್ಪಿಗೆ

ಸೇಕ್ ಅಬ್ದುಲ್ಲರಿಗೆ ಕೆಲವು ರಿಯಾಯಿತಿಗಳನ್ನು ಕೊಟ್ಟಿದೆ, ಆದರೆ ಮೂಲಭೂತ ವಿಚಾರಗಳಲ್ಲಿ ಹಿಂದಕ್ಕೆ ಹೋಗಿಲ್ಲ ಎಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ನವ ದೆಹಲಿಯಲ್ಲಿ ವಿರೋಧಪಕ್ಷದವರಿಗೆ ತಿಳಿಸಿದರು

●

ಬೀರೇಂದ್ರರ ಕಿರೀಟಧಾರಣೆ ಮಹೋತ್ಸವ

ಮಣ್ಣಿನೊಡನೆ ಎಣ್ಣೆಯನ್ನು ಹಚ್ಚಿಕೊಂಡು ಪವಿತ್ರ ಹೃದಯಗಳಲ್ಲಿ ಮಿಂದು, ದೀರ್ಘ ನೇದ ಪಥಣಗಳ ನಡುವೆ, ವಿಶ್ವದ ಸುಮಾರು ಅರ್ಧ ರಾಷ್ಟ್ರಗಳ ಘನ ವ್ಯಕ್ತಿಗಳವರ ಸಮ್ಮುಖದಲ್ಲಿ ನೇಪಾಳ ದೊರೆ ಬೀರೇಂದ್ರ ಬೀರ್ ಬಿಕ್ರಂ ಷಾರವರ ಕಿರೀಟಧಾರಣಾ ಮಹೋತ್ಸವ ಈ ತಿಂಗಳು 24 ನೇ ತಾ. ವಿಶೇಷ ವೈಭವದಿಂದ ನೆರವೇರಿತು ಪ್ರಪಂಚದಲ್ಲಿರುವ ಒಂದೇ ಹಿಂದೂ ರಾಜ್ಯ ನೇಪಾಳದ ದೊರೆಯ ಕಿರೀಟಧಾರಣೆ ಮಹೋತ್ಸವ ಖಟಮಂಡು ವಿನ ಹನುಮಾನ್ ಧೋಕ ಅರಮನೆಯಲ್ಲಿ ನೆರವೇರಿತು. ಕಿರೀಟಧಾರಣೆ ಆದನಂತರ ದೊರೆ ಬೀರೇಂದ್ರರು ಸಿಂಹಾಸನದ ಮೇಲೆ ಮಂಡಿಸಿದರು. ಅವರ ಎಡಗಡೆ ರಾಣಿ ಐಶ್ವರ್ಯ ಮತ್ತು ಎಲಗಡೆ 5 ವರ್ಷದ ರಾಜಕುಮಾರ ದೀಪೇಂದ್ರ ಮಂಡಿಸಿದರು.

★

ಮೆ|| ಆಡ್ವೆಂಚರ್ ಮೂಲಕ ಕಲುಷಿರುವ ಮೆ|| ದಿ ಲ್ಯಾಕ್ ಅಂಡ್ ಪೇಟ್, ಲಿಮಿಟೆಡ್‌ನ ಈ ವರ್ಷದ ಸುಂದರವಾದ ಕ್ಯಾಲೆಂಡರ್‌ನ್ನು ಸಾದರದಿಂದ ಸ್ವೀಕರಿಸಿದ್ದೇವೆ

ಅರಸ್‌ರ ಮೇಲೆ ಆರೋಪ

ಬೆಂಗಳೂರಿನಲ್ಲಿ ಸೇರಿರುವ ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಹೆಚ್. ಡಿ. ದೇವೇಗೌಡರು ಮುಖ್ಯ ಮಂತ್ರಿ ಶ್ರೀ ಡಿ ದೇವರಾಜ ಅರಸರ ಮೇಲೆ ಹತ್ತು ಆರೋಪಗಳನ್ನು ಹೊರಿಸಿ, ಈ ವಿಚಾರದಲ್ಲಿ ನ್ಯಾಯಾಂಗ ವಿಚಾರಣೆ ಆಗಬೇಕು ಎಂದರು

★

ಪ್ರಧಾನರ ಭರವಸೆ

ಲೋಕಸಭೆಯಲ್ಲಿ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಮಾತನಾಡುತ್ತಾ, ಭಾರತ ಹಾಗೂ ಜಮ್ಮು–ಕಾಶ್ಮೀರ ಇವುಗಳ ನಡುವೆ ಇರುವ ಭೌತಾತ್ಮಕ ಸಂಬಂಧ ಮುಂದುವರಿಯುವುದೆಂದು ತಿಳಿಸಿದರು ಒಪ್ಪಂದ ಮಾಡಿಕೊಂಡಿರುವ ಕಾರಣ ಯಾವ ಬಗೆಯಲ್ಲೂ ಅದು ಶಾಂತಿಭಂಗವಾಗುವುದಿಲ್ಲ ಎಂದು ತಿಳಿಸಿದರು.

★

ಅಪೂರ್ಣ ಯಶಸ್ಸು

ಸೇಕ್ ಅಬ್ದುಲ್ಲ ಮತ್ತು ಕೇಂದ್ರದ ಒಪ್ಪಂದ ವಿರುದ್ಧ ಜನಸಂಘದ ಹರತಾಳಕ್ಕೆ ಕರೆ ಜಮ್ಮುವಿನಲ್ಲಿ ಅಪೂರ್ಣ ಯಶಸ್ವಿಯಾಯಿತು

○

ಕಾವೇರಿ ನೀರು

ಕಾವೇರಿ ನೀರು ಹಂಚಿಕೊಳ್ಳುವ ವಿಚಾರದಲ್ಲಿ ಒಪ್ಪಿಗೆಗೆ ಅರ್ಹವಾದ ಪರಿಹಾರವನ್ನು ಕಂಡುಹಿಡಿಯಲು ಕರ್ನಾಟಕ, ತಮಿಳುನಾಡು ಮತ್ತು ಕೇರಳ ಮುಖ್ಯಮಂತ್ರಿಗಳ ಸಭೆಯನ್ನು ಕೇಂದ್ರ ಸರ್ಕಾರ ಕರೆಯುವುದು ಈ ವಿವಾದವನ್ನು ಸಂಧಾನಯಿತಿಗೆ ಕಳುಹಿಸಲು ಕೇಂದ್ರಕ್ಕೆ ಕೃಪ್ತಿಯಿಲ್ಲವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು

ಅನೌಪಚಾರಿಕ ಪಡಿತರ ಪದ್ಧತಿ

ಚಿತ್ರ, ಭದ್ರಾವತಿ ಮತ್ತು ಪಹಾಣಾಡು ಕೈಗಾರಿಕೆ ಪ್ರದೇಶಗಳಲ್ಲಿ ಅನೌಪಚಾರಿಕ ಪಡಿತರವಸ್ತು ಜಾರಿಗೆತರುವ ಅಂಶವನ್ನು ಪರಿಶೀಲಿಸಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ಡಿ ದೇವರಾಜ ಅರಸ್ ರವರು ವಿಧಾನಸಭೆಯಲ್ಲಿ ತಿಳಿಸಿದರು.

★

ಸಾದರ ಸ್ವೀಕಾರ

ಮೈಸೂರು ಜಿಲ್ಲಾ ಸಮಿತಿ ಪ್ರಕಟಿಸಿರುವ, ಮೈಸೂರು, ಮಂಡ್ಯ, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಮಕ್ಕಳು ಮತ್ತು ಯುವಜನರ ಮೇಲೆ ಪ್ರಕಟಿಸಿರುವ ನೆನಪು ಸಂಚಿಕೆ ಭಾರತ ಸೇವಾದಳವನ್ನು ಸಾದರದಿಂದ ಸ್ವೀಕರಿಸಿದ್ದೇವೆ.

★

ಕರ್ನಾಟಕ ವಿಧಾನ ಮಂಡಲದ ಔದ್ಯೋಗಿಕ ಸಂಸ್ಥೆಗಳ ಸಮಿತಿಯ ಸಭೆ 26 ನೆಯ ತಾರೀಖು ಬೆಳಿಗ್ಗೆ 9-30 ಗಂಟೆಗೆ ಅವಶ್ಯ ಎನ್ನಿಸಿದರೆ ಅನಂತರದ ದಿನಗಳಲ್ಲಿ ವಿಧಾನ ಸೌಧದಲ್ಲಿ ಜರಗುವುದು.

ವುಡ್‌ಲಾಂಡ್ 21 2 75 ರಿಂದ

ಅಮೋಘ ಆರಂಭ

ಕನ್ನಾ ಕುಮಾರಿ

ಅಪೂರ್ವ ಕಲರ್ ಮಲಯಾಳಂ ಕಲಾಕೃತಿ

ಪಾತ್ರ– ಕಮಲಾ ಹಸನ್ ರೀಟಾ ಬಹದ್ದೂರಿ ದಿನ ೫ ಪ್ರದರ್ಶನಗಳು

ಅಪೆರಾ 21 2 75 ರಿಂದ

ಬಾಳು ಬೆಳಗಿತು

ಅಮೋಘ ಕನ್ನಡ ಚಿತ್ರ

ಪಾತ್ರ – ರಾಜಕುಮಾರ್ ಜಯಂತಿ ದ್ವಾರಕೀಶ್ ದಿನ 3 ಪ್ರದರ್ಶನಗಳು

For Large Range of Daily Wear

Nylex, Cotton, Voile, etc Sarees
in up-to-date Designs

Please Visit :

Bank Road Bahusar

SHANTI

SUDHA

A Superb Tonic

Contribute Liberally

to the National Defence Fund

Quality Printing Neat Binding

Lakshminarasimha Press

Sivarampet Mysore 1

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Protect the Cow

Help The Gorakshana

—Humanitarian Propoganda Monthly—

Edited Printed and Published by Dharmapracharanirata M S. Krishna Rao (Proprietor) at the Satvavadi Press, Chamarajapuram Mysore